**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : 2316 (2782) |
| **ಸದಸ್ಯರ ಹೆಸರು** | : ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | : ದಿನಾಂಕ:28.03.2022 |
| **ಉತ್ತರಿಸುವ ಸಚಿವರು** | : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ, ಮುಖ್ಯ ಶಿಕ್ಷಕರ ವರ್ಗಾವಣೆಗಾಗಿ ಪ್ರಸ್ತುತ ಇರುವ ನಿಯಮಾವಳಿಗಳೇನು; ವರ್ಗಾವಣೆ ಕಾಯ್ದೆಯ ಪ್ರತಿ ನೀಡುವುದು; ವಿವರಗಳೊಂದಿಗೆ ಪ್ರತಿ ಒದಗಿಸುವುದು) | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ-2020 ಸಂವ್ಯಾಶಾಇ 12 ಶಾಸನ 2020 ದಿನಾಂಕ: 27/03/2020 ರಲ್ಲಿ ವರ್ಗಾವಣಾ ಕಾಯ್ದೆಯನ್ನು ಜಾರಿಗೆ ತಂದಿದೆ. ಈ ಕಾಯ್ದೆಯ ಆಧಾರದ ಮೇಲೆ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2020ರ ಪ್ರಕಾರ ಇಪಿ 8 ಇಟಿಆರ್ 2020, ದಿನಾಂಕ: 09/07/2020ರಲ್ಲಿ ನಿಯಮ ರೂಪಿಸಲಾಗಿದೆ. (ವರ್ಗಾವಣಾ ಕಾಯ್ದೆ ಮತ್ತು ನಿಯಮಗಳ ಪ್ರತಿಯನ್ನು ಲಗತ್ತಿಸಿದೆ) |
| ಆ) | ಈ ನಿಯಮಾವಳಿಗಳಿಂದ ವರ್ಗಾವಣೆ ಬಯಸಿರುವ ಶಿಕ್ಷಕರಿಗೆ ನಿರಾಸೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವರ್ಗಾವಣೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅರ್ಹ ಶಿಕ್ಷಕರು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಅವರಿಗೆ ಅನುಕೂಲವಾದ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಇದು ಶಿಕ್ಷಕ ಸ್ನೇಹಿ ವರ್ಗಾವಣಾ ಆಶಯಗಳೊಂದಿಗೆ ರೂಪಿಸಲಾದ ಕಾಯ್ದೆ ಮತ್ತು ನಿಯಮಗಳಾಗಿರುವುದರಿಂದ ಶಿಕ್ಷಕರಿಗೆ ಯಾವುದೇ ನಿರಾಸೆಯಾಗಿರುವುದಿಲ್ಲ. |
| ಇ) | ಈ ವರ್ಗಾವಣೆ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೇಲಿನ ಉತ್ತರದಿಂದಾಗಿ ಪ್ರಶ್ನೆ ಉದ್ಭವಿಸುವುದಿಲ್ಲ. |
| ಈ) | ಶಿಕ್ಷಕರಿಗೆ ಒಂದು ಬಾರಿ ಅವಕಾಶ ಕಲ್ಪಿಸಿ ತಮ್ಮ ತಮ್ಮ ಸ್ವಂತ ಜಿಲ್ಲೆ ಅಥವಾ ತಾಲ್ಲೂಕುಗಳಿಗೆ ವರ್ಗಾವಣೆ ಹೊಂದಲು ನಿಯಮಗಳಲ್ಲಿ ತಿದ್ದುಪಡಿ ಮಾಡಿ ಅವಕಾಶ ಕಲ್ಪಿಸಲಾಗುವುದೇ? | ಸೇವಾವಧಿಯಲ್ಲಿ ಒಂದು ಬಾರಿ ಶಿಕ್ಷಕರ ಕೋರಿಕೆಯಂತೆ ಅವರು ಕೋರಿರುವ ಸ್ಥಳಕ್ಕೆ ವರ್ಗಾವಣೆ ನೀಡಿದಲ್ಲಿ ಈಗಾಗಲೇ ಶಿಕ್ಷಕರ ಕೊರತೆ ಇರುವ ಜಿಲ್ಲೆ/ತಾಲ್ಲೂಕಿನಿಂದ ಶಿಕ್ಷಕರ ಕೊರತೆ ಇಲ್ಲದ ಜಿಲ್ಲೆ/ತಾಲ್ಲೂಕಿಗೆ ವರ್ಗಾವಣೆ ನೀಡಿದ ನಂತರ ಶಿಕ್ಷಕರ ಕೊರತೆ ಇರುವ ಜಿಲ್ಲೆ/ತಾಲ್ಲೂಕಿನಲ್ಲಿ ಮತ್ತಷ್ಟು ಶಿಕ್ಷಕರ ಕೊರತೆ ಉಂಟಾಗಿ ಪ್ರಾದೇಶಿಕ ಅಸಮತೋಲನ ಉಂಟಾಗಿ ಮಕ್ಕಳ ಕಲಿಕಾ ಗುಣಮಟ್ಟ ಹಾಗೂ ಶೈಕ್ಷಣಿಕ ಪ್ರಗತಿಯ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಗಳಿವೆ.<br><br>ಪ್ರಸ್ತುತ ಜಾರಿಯಲ್ಲಿರುವ ಶಿಕ್ಷಕರ ವರ್ಗಾವಣಾ ಕಾಯ್ದೆ/ನಿಯಮಗಳಲ್ಲಿ ವರ್ಗಾವಣೆ ಪಡೆಯಲು ನಿರ್ಧಿಷ್ಟವಾಗಿ ಮಾನದಂಡವನ್ನು ರೂಪಿಸಲಾಗಿದೆ. ಪ್ರಸ್ತುತ ಇದೇ ಕಾಯ್ದೆ/ನಿಯಮ ಚಾಲ್ತಿಯಲ್ಲಿರುವುದರಿಂದ ವರ್ಗಾವಣಾ ಕಾಯ್ದೆಗೆ ತಿದ್ದುಪಡಿ ತಾರದೇ (ಒನ್ ಟೈಮ್ ಸೆಟ್ಲ್‌ಮೆಂಟ್) ಶಿಕ್ಷಕರು ತಮ್ಮ ಸ್ವಂತ ಜಿಲ್ಲೆ/ತಾಲ್ಲೂಕಿಗೆ ವರ್ಗಾವಣೆ ನೀಡಲು ಅವಕಾಶವಿರುವುದಿಲ್ಲ. |

**ಸಂಖ್ಯೆ**: ಇಪಿ 44 ಪಿಎಂಎ 2022

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ
ಹಾಗೂ ಸಕಾಲ ಸಚಿವರು